ಇಂದು ದಿನಾಂಕಃ 05.10.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲುಃ** ಎದುರುದಾರರ ಪರ ಶ್ರೀ ಎನ್.ಹೆಚ್.ಕೆ ವಕೀಲರಿಂದಃ

1. ನನಗೆ ಅನ್ಯಾಯವಾಗಿರುವುದರಿಂದ ಈ ಪ್ರಕರಣವನ್ನು ದಾಖಲಿಸಿದ್ದೇನೆ. ಈ ಹಿಂದಿನ ದಾವೆ ದಿನಾಂಕಃ 19/12/2015 ರಂದು ವಜಾಗೊಂಡಿರುತ್ತದೆ. ಈ ಹಿಂದೆ ನಾವು 6 ಜನ ಕೂಡಿ ದಾವೆ ಮಾಡಿದ್ದೇವು. ಪ್ರಸ್ತುತ ಈ ಅರ್ಜಿಯನ್ನು ನಾವು 3 ಜನ ಕೂಡಿ ಈ ಅರ್ಜಿ ಸಲ್ಲಿಸಿದ್ದು, ಅಕ್ಬರ್ ಸಾಬ ಕೀರಗಾನಿ, ಜಬ್ಬರ್ ಗರಡಿಮನಿಯವರು ಈ ಅರ್ಜಿಯಲ್ಲಿ ಅರ್ಜಿದಾರರಾಗಿರುವುದಿಲ್ಲ. ಈ ಹಿಂದಿನ ದಾವೆಯಲ್ಲಿ ಅಕ್ಬರ್ ಸಾಬರವರು ನಮ್ಮ ಸಂಸ್ಥೆಯ ಉಪಾಧ್ಯಕ್ಷರಾಗಿದ್ದರು. ಸದರಿಯವರನ್ನು ಏಕೆ ಈ ಅರ್ಜಿಯಲ್ಲಿ ಸೇರಿಸಿಲ್ಲ ಎಂದು ನನಗೆ ಹೇಳಲು ಬರುವುದಿಲ್ಲ. ಈ ಹಿಂದಿನ ದಾವೆಯಲ್ಲಿ ಪ್ರತಿ ದಿನಾಂಕಕ್ಕೆ ನಾನು ಹಾಜರಾಗುತ್ತಿದ್ದೆ. ಸದರಿ ದಾವೆಯಲ್ಲಿ ದಿನಾಂಕಃ15/03/2012 ಕ್ಕೆ ಸಾಕ್ಷಿಗೆ ನಿಗಧಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ದಿನಾಂಕಃ 18/08/2014 ಕ್ಕೆ ನಿಗಧಿಪಡಿಸಿದರು ಎಂದರೆ ಸರಿ.

2. ಈ ಹಿಂದಿನ ದಾವೆಯಲ್ಲಿ ನ್ಯಾಯಾಲಯವು ನನಗೆ ಸಾಕಷ್ಟು ಬಾರಿ ಸಮಯಾವಕಾಶ ಒದಗಿಸಿತ್ತು ಎಂದರೆ ಸರಿ. ಮೂಲ ಅಸಲು ದಾವೆಯ ಪ್ರತಿವಾದಿ 3 ರವರು ಯಾವಾಗ ಮರಣ ಹೊಂದಿದರು ಎಂದು ನನಗೆ ಗೊತ್ತಿಲ್ಲ. ಸದರಿಯವರು 11/07/2015 ಕ್ಕೆ ಮರಣ ಹೊಂದಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ವಾರಸುದಾರರು ಇರುವ ಬಗ್ಗೆ ನನಗೆ ಮಾಹಿತಿ ಇದೆ ಎಂದು ಸೂಚಿಸುವುದು ಸರಿಯಲ್ಲ. ನನ್ನ ಮನೆ ಮಾಸೂರಿನಲ್ಲಿ ಇರುವುದಿಲ್ಲ. ಪ್ರತಿವಾದಿ 3 ರವರು ದಿನಾಂಕಃ 11/07/2015 ರಂದು ಮರಣ ಹೊಂದಿರುವ ಕುರಿತು ನ್ಯಾಯಾಲಯಕ್ಕೆ ದಿನಾಂಕಃ 22/07/2015 ರಂದು ತಿಳಿಸಲಾಗಿದೆ ಎಂದರೆ ಸಾಕ್ಷಿಯು ನನಗೆ ದಿನಾಂಕಃ 07/12/2015 ರಂದು ತಿಳಿದಿದೆ ಎಂದು ನುಡಿಯುತ್ತಾರೆ. ನಾನು ಆ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 22/07/2015 ರಂದು ನಾನು ನ್ಯಾಯಾಲಯದಲ್ಲಿ ಹಾಜರಿದ್ದೆ ಎಂದರೆ ಸರಿಯಲ್ಲ.

3. ನಂತರ ದಿನಾಂಕಃ 19/12/2015 ರಂದು ನನ್ನ ದಾವೆ ವಜಾ ಆಗಿದೆ ಎಂದರೆ ಸಾಕ್ಷಿಯು ಆ ದಿನ ನನ್ನ ವಕೀಲರಿಗೆ ಆರೋಗ್ಯ ಸರಿ ಇರಲಿಲ್ಲ ಎಂದು ನುಡಿಯುತ್ತಾರೆ. ಆ ಬಗ್ಗೆ ದಾಖಲಾತಿಗಳನ್ನು ನಾನು ಹಾಜರುಪಡಿಸುತ್ತೇನೆ. ಈ ಅರ್ಜಿಯನ್ನು ದಿನಾಂಕಃ 12/01/2016 ರಂದು ದಾಖಲು ಮಾಡಿದ್ದೇನೆ ಎಂದರೆ ಸಾಕ್ಷಿಯು ದಿನಾಂಕಃ 21/12/2015 ಕ್ಕೆ ಮಾಡಿರುತ್ತೇವೆ ಎಂದು ನುಡಿಯುತ್ತಾರೆ. ಈ ಅರ್ಜಿಯನ್ನು 1 ತಿಂಗಳು, 8 ದಿನ ತಡಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕಾಗಿ ಕಾಲ ವಿಳಂಬವನ್ನು ಮನ್ನಿಸಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ಅರ್ಜಿ ಮತ್ತು ಪ್ರಮಾಣ ಪತ್ರದಲ್ಲಿರುವ ಎಲ್ಲಾ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ.

4. ಮೂಲ ದಾವೆಯ ಇಬ್ಬರು ವಾದಿಗಳನ್ನು ಹೊರತುಪಡಿಸಿ ಈ ಅರ್ಜಿಯನ್ನು ಸಲ್ಲಿಸಿರುವ ಕಾರಣದಿಂದ ಈ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ಮೂಲ ದಾವೆಯಲ್ಲಿ ನ್ಯಾಯಾಲಯ ಸಾಕಷ್ಟು ಸಮಯ ಕೊಟ್ಟ ಹೊರತಾಗಿಯೂ ಪ್ರಕರಣವನ್ನು ನಡೆಸಲು ಆಸಕ್ತಿ ಇರದಿದ್ದರಿಂದ ನಾವು ಪ್ರಕರಣವನ್ನು ನಡೆಸಿಲ್ಲ ಎಂದು ಸೂಚಿಸುವುದು ಸರಿಯಲ್ಲ. ನಮ್ಮ ಊರಿನಲ್ಲಿ ಉಳಿದ ಎಲ್ಲರೂ ದಾವೆಯನ್ನು ನಡೆಸುವುದು ಬೇಡ ಎಂದು ಹಿಂತೆಗೆದುಕೊಳ್ಳಲು ಹೇಳಿದ್ದರೂ ಸಹ ನಾನು ಎದುರುದಾರರಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಅರ್ಜಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

ಸಹಿ/-

ಓ ಹೇ ಕೇ ಸರಿ ಇದೆ. ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.